ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 04-04-2017

## ಪತ್ರಿಕಾ ಆಮಂತ್ರಣ

**1. ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ, ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನರಾಂ ಅವರ 110ನೇ ಜನ್ಮ ದಿನಾಚರಣೆ:**

**ಪ್ರತಿಮೆಗೆ ಮಾಲಾರ್ಪಣೆ:**

**ಸಿದ್ದರಾಮಯ್ಯ, ಮುಖ್ಯಮಂತ್ರಿಗಳು,**
**ಕರ್ನಾಟಕ ಸರ್ಕಾರ.**

**ಹಾಗೂ**

**ಹೆಚ್. ಆಂಜನೇಯ,**
**ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.**

**ದಿನಾಂಕ: 05–04–2017, ಬುಧವಾರ, ಸಮಯ: ಬೆಳಿಗ್ಗೆ 10–00 ಗಂಟೆಗೆ**

**ಸ್ಥಳ: ವಿಧಾನಸೌಧದ ಪಶ್ಚಿಮ ದ್ವಾರ, ಬೆಂಗಳೂರು.**

# ಪತ್ರಿಕಾ ಪ್ರಕಟಣೆ

## ಆರು ದಿನಗಳ ಕೋಳಿ ಸಾಕಾಣಿಕಾ ತರಬೇತಿ

ಬೆಂಗಳೂರು, ಏಪ್ರಿಲ್ 4 (ಕರ್ನಾಟಕ ವಾರ್ತೆ)

**ಹೆಸರಘಟ್ಟದ ರಾಜ್ಯ ಕುಕ್ಕುಟ ಕ್ಷೇತ್ರ ಇಲ್ಲಿ ಏಪ್ರಿಲ್ 17 ರಿಂದ 22 ರವರೆಗೆ 6 ದಿನಗಳ ಕೋಳಿ ಸಾಕಾಣಿಕೆ ತರಬೇತಿ ಕಾರ್ಯಕ್ರಮವನ್ನು ರೈತರು ಮತ್ತು ರೈತ ಮಹಿಳೆಯರು ಹಾಗೂ ನಿರುದ್ಯೋಗಿ ಯುವಕ/ಯುವತಿಯರಿಗಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.**

**ತರಬೇತಿ ಪಡೆಯಲು ಅಭ್ಯರ್ಥಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿದ್ದು, ದಿನವೊಂದಕ್ಕೆ 25 ರೂ. ನಂತರ ಶುಲ್ಕ ಪಾವತಿಸಬೇಕು. ತರಬೇತಿ ಪಡೆಯಲು ಇಚ್ಛಿಸುವರು ವಾಸಸ್ಥಳದ ದೃಢೀಕರಣದ ಪ್ರತಿ (ಆಧಾರ್/ಮತದಾರರ ಗುರುತಿನ ಚೀಟಿ ಇತ್ಯಾದಿ) ಮತ್ತು ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು ಹಾಗೂ ಸಂಬಂಧಪಟ್ಟ/ಸ್ಥಳೀಯ ಪಶುವೈದ್ಯರ ಶಿಫಾರಸ್ಸು ಪತ್ರದೊಂದಿಗೆ ಏಪ್ರಿಲ್ 17 ರಂದು ಬೆಳಿಗ್ಗೆ 9.30 ಗಂಟೆಗೆ ನೇರವಾಗಿ ತರಬೇತಿ ಹಾಜರಾಗಬಹುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯುಲ್ಲಿ ಕ್ಷೇತ್ರಕ್ಕೆ ನೇರವಾಗಿ ಭೇಟಿ ನೀಡಿ ಅಥವಾ ದೂರವಾಣಿ ಮುಖಾಂತರ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಹಾಗೂ ನೋಂದಣಿ ಮಾಡಿಸಬಹುದಾಗಿದೆ. ಮೊದಲು ನೋಂದಾಯಿಸಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.**

**ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 080 – 28466093 ನ್ನು ಸಂಪರ್ಕಿಸಬಹುದು.**

**ಎಸ್‌ಎಂ:ಜೆಡಿ:ಜಿಪಿಆರ್**

# ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆಗೆ ಅರ್ಜಿ ಆಹ್ವಾನ

ಬೆಂಗಳೂರು, ಏಪ್ರಿಲ್ 4 (ಕರ್ನಾಟಕ ವಾರ್ತೆ)

ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆಯನ್ನು 2017ರ ಆಗಸ್ಟ್ ತಿಂಗಳಿನಲ್ಲಿ ನಡೆಸಲು ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷಾ ಮಂಡಳಿಯು ನಿರ್ಧರಿಸಿದ್ದು. ಆಸಕ್ರ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಪರೀಕ್ಷೆಯ ಅರ್ಜಿ ಮತ್ತು ಅನುಭಂದಗಳನ್ನು ಕಾರ್ಯದರ್ಶಿಗಳು, ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷಾ ಮಂಡಳಿ, ಕಾರ್ಮಿಕ ಭವನ, 2ನೇ ಮಹಡಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇಲ್ಲಿಗೆ ಸಲ್ಲಿಸಲು ಸೂಚಿಸಿದೆ. ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆಗೆ ಅರ್ಜಿ ಸಲ್ಲಿಸುವ ವಿಧಾನ ಹಾಗೂ ಈ

ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ಈ ಇಲಾಖೆಯ ವೆಬ್‌ಸೈಟ್ www.karnataka.gov.in/surakshate ರಿಂದ ಪಡೆದುಕೊಳ್ಳಬಹುದಾಗಿದೆ ಎಂದು ಕಾರ್ಖಾನೆಗಳ ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

## ಭಾರತೀಯ ರಫ್ತು ಸಂಸ್ಥೆಗಳ ಮಹಾ ಮಂಡಳದ ನೂತನ ಅಧ್ಯಕ್ಷರಾಗಿ ಗಣೇಶ್‌ಕುಮಾರ್ ಗುಪ್ತ ಅಧಿಕಾರ ಸ್ವೀಕಾರ

ಬೆಂಗಳೂರು, ಏಪ್ರಿಲ್ 4 (ಕರ್ನಾಟಕ ವಾರ್ತೆ)

**ಭಾರತೀಯ ರಫ್ತು ಸಂಸ್ಥೆಗಳ ಮಹಾ ಮಂಡಳದ ನೂತನ ಅಧ್ಯಕ್ಷರಾಗಿ ಗಣೇಶ್‌ಕುಮಾರ್ ಗುಪ್ತ ಅವರು ಇಂದು ಅಧಿಕಾರ ಸ್ವೀಕರಿಸಿದರು.**

**ನಂತರ ಮಾತನಾಡಿದ ಗಣೇಶ್‌ಕುಮಾರ್ ಗುಪ್ತ ಅವರು ವಿತ್ತೀಯ ವರ್ಷ 2017–18 ರ ಸಾಲಿನಲ್ಲಿ ವಾಣಿಜ್ಯ ಸರಕುಗಳ ರಫ್ತು ವ್ಯವಹಾರವು ಸುಮಾರು 315 ಬಿಲಿಯನ್ ಅಮೆರಿಕನ್ ಡಾಲರ್‌ಗೆ ತಲುಪಿದರೆ, ಸೇವೆಗಳ ರಫ್ತುದಾರಿಕೆಯು ಸುಮಾರು 185 ಬಿಲಿಯನ್ ಅಮೇರಿಕನ್ ಡಾಲರ್‌ಗೆ ತಲುಪುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ.**

**ಹಿಂದಿನ ವರ್ಷಗಳಲ್ಲಿ ಸಹ ನಾವು 300 ಬಿಲಿಯನ್ ಅಮೆರಿಕನ್ ಡಾಲರ್ ಮೌಲ್ಯದ ವಾಣಿಜ್ಯ ಸರಕುಗಳ ರಫ್ತು ಮಾಡಿದ್ದೇವೆ. ಕಳೆದ ಆರು ತಿಂಗಳ ಅವಧಿಯಲ್ಲಿ ಅದರಲ್ಲೂ ವಿಶೇವಾಗಿ ಫೆಬ್ರವರಿ ತಿಂಗಳಿನಲ್ಲಿ ರಫ್ತುದಾರಿಕೆಯು ಸುಮಾರು ಶೇಕ 17.5 ರಷ್ಟು ಪ್ರಗತಿ ಹೊಂದಿದೆ ಎಂದು ಅವರು ತಿಳಿಸಿದರು.**

**ಎಸ್‌ಎಂ/ಕೆಎಂ**

## Assumes Charges

**Bangalore, April 4 (Karnataka Information)**

**Newly appointed President of Federation of Indian Export Organisations Ganesh Kumar Gupta assumed office today.**

**On this occasion said that we expect the merchandise exports to be around USD 315 billion and services exports to about USD 185 billion in FY 2017-18. The Federation expects to end the fiscal 2016-17 with an export of about USD 270-275 bilion as againist USD 262 billion in the previous year, with a growth of around 3-4% for the year in the merchandise sector whereas in services sector FIFO is expecting an export of USD 160 billion in 2016-17.**

**The new FIEO President G.K. Gupta is of the view that as we had already touched the USD 300 billion merchandise exports in the past also, we should look at more aggressively increasing our exports with previsous 6 month specially the February exports showing an impressive double digit growth of arount 17.5 percent.**

**He also feels that a greater emphasis needs to be given to exports in the new GST regime with liquidity being the key challenge for the exporters. He also said that in the upcoming mid-term review of the Foreign Trade Policy, there is a need relook at further diversify the product basket focusing more on high-tech products where India's share in global trade is very low, to further compete in the international market.**

**sm/km**